# ಸಂಪಾದಕೀಯ




## ಸೃಷ್ಟಿ–ವಿನಾಶ

ಚೈತ್ರಮಾಸದ ಪ್ರಾರಂಭದ ದಿನವನ್ನು ಚಾಂದ್ರಮಾನ ಯುಗಾದಿ– ಎಂದರೆ ಯುಗದ ಪ್ರಾರಂಭ ಎಂದು ಕರೆಯುತ್ತಾರೆ. ಸೃಷ್ಟಿಕರ್ತನಾದ ಬ್ರಹ್ಮನು ಇಂದು ಜಗತ್ತನ್ನು ಸೃಷ್ಟಿಸಿದನೆಂದೂ ಕಾಲಗಣನೆ ಇಂದಿನಿಂದ ಪ್ರಾರಂಭವಾಯಿತೆಂದೂ ಪ್ರತೀತಿ. ಆದರೆ ನಮ್ಮ ವೇದಾಂತದ ಪ್ರಕಾರ ಸೃಷ್ಟಿಗೆ ಆದಿಅಂತ್ಯಗಳಿಲ್ಲ, ದೇಶ ಕಾಲಗಳಲ್ಲಿ ಅದು ಅನಂತವಾಗಿದೆ. ಇಡೀ ಸೃಷ್ಟಿಯು ಮೂಲ ಕಾರಣಾವಸ್ಥೆಗೆ ಹೋಗಿ ಅನಂತರ ಮತ್ತೆ ವಿಕಾಸಹೊಂದುತ್ತದೆ ಎಂದು ಹೇಳುತ್ತಾರೆ.ಈ ಆವಿರ್ಭಾವ–ತಿರೋಭಾವವನ್ನು ಒಂದು **ಕಲ್ಪ** ಎಂದು ಕರೆಯುತ್ತಾರೆ. ಒಮ್ಮೆ ತಿರೋಭಾವಗೊಂಡ ಇಡೀ ವಿಶ್ವವು ಪುನಃಆವಿರ್ಭಾವಗೊಳ್ಳುವುದನ್ನೇ ಹೊಸ ಸೃಷ್ಟಿ ಎಂದು ಕರೆಯುವುದು ಮತ್ತು ಇದರ ಆದಿಯೇ **ಯುಗಾದಿ**.

ಸೃಷ್ಟಿ ಎಂದರೆ ಮೊದಲು ಇಲ್ಲದಿರುವುದಾವುದೊ ಉಂಟಾಗುವುದಲ್ಲ. ಹಾಗೆ ಹೊಸದು ಉಂಟಾಗುವುದು ಅಸಾಧ್ಯ. ಶೂನ್ಯದಿಂದ ಯಾವುದೂ ಉಂಟಾಗುವುದಿಲ್ಲ. ಹಿಂದಿನ ಕಾರಣರೂಪವೇ ಕಾರ್ಯರೂಪದ ಸೃಷ್ಟಿಯಾಗಿ ವ್ಯಕ್ತವಾಗುತ್ತದೆ. ಕಾರಣವೇ ಕಾರ್ಯರೂಪದಲ್ಲಿ ವ್ಯಕ್ತವಾಗುವುದನ್ನು ತತ್ತ್ವಶಾಸ್ತ್ರದಲ್ಲಿ **ಸತ್ಕಾರ್ಯವಾದ** ಎಂದು ಕರೆಯುತ್ತಾರೆ. ಬೀಜದಲ್ಲಿ ವೃಕ್ಷವು ಸುಪ್ತಾವಸ್ಥೆಯಲ್ಲಿರುವಂತೆ ಕಾರಣದಲ್ಲಿ ಕಾರ್ಯ ಮೊದಲೇ ಇರುತ್ತದೆ–ಎನ್ನುವುದು ಸತ್ಕಾರ್ಯವಾದ. ಈ ವಿಶ್ವದಲ್ಲಿ ಯಾವುದನ್ನೂ ಹೊಸದಾಗಿ ಉತ್ಪತ್ತಿ ಮಾಡಲಾಗುವುದಿಲ್ಲ ಹಾಗೂ ಯಾವುದನ್ನೂ ಪೂರ್ಣ ನಾಶಗೊಳಿಸಲಾಗುವುದಿಲ್ಲ. ಸೃಷ್ಟಿ-ವಿನಾಶಗಳು ಕೇವಲ ರೂಪಾಂತರ ಅಷ್ಟೇ. ಆದ್ದರಿಂದ ಸೃಷ್ಟಿಯನ್ನೇ ವಿನಾಶವೆಂದೂ ವಿನಾಶವನ್ನೇ ಸೃಷ್ಟಿಯೆಂದೂ ಕರೆಯಬಹುದು. ಇದು ನಮ್ಮ ಮನೋಭಾವವನ್ನು ಅವಲಂಬಿಸುತ್ತದೆ. ನನಗೆ ಮಡಕೆ ಬೇಕಾದರೆ ಮಣ್ಣಿನಿಂದ ಅದನ್ನು ಸೃಷ್ಟಿಸುತ್ತೇನೆ. ಇಲ್ಲಿ ಮಣ್ಣಿನ ವಿನಾಶ ಮತ್ತು ಮಡಕೆಯ ಸೃಷ್ಟಿಯಾಯಿತು. ನನಗೆ ಮಡಕೆ ಬೇಡವಾದರೆ ಅದನ್ನು ನಾಶಮಾಡುತ್ತೇನೆ. ಈ ನಾಶದಿಂದ ಮಣ್ಣಿನ ಸೃಷ್ಟಿಯಾಗುತ್ತದೆ.

ಹೀಗೆಯೇ ಈ ಜಗತ್ತು ಸೃಷ್ಟಿಯಾಗಿರುವುದು ನಮ್ಮ ಇಚ್ಛೆಯಿಂದ. ನಾವು ಇಷ್ಟಪಡುವುದರಿಂದ ಈ ಜಗತ್ತು ಇದೆ. ಇಡೀ ಜಗತ್ತಿನ ಸಮಷ್ಟಿ ಇಚ್ಛೆಯನ್ನೇ–ಸೃಷ್ಟಿಸಂಕಲ್ಪವನ್ನೇ–ಸೃಷ್ಟಿಕರ್ತ ಬ್ರಹ್ಮಾ ಎಂದು ಕರೆಯುವುದು. ಈ ಸೃಷ್ಟಿಸಂಕಲ್ಪದಿಂದ ಜಗತ್ತು ಉಂಟಾದ ದಿನವನ್ನು **ಯುಗಾದಿ** ಎಂದು ಕರೆಯುವುದು.

## ಜೀವನದಲ್ಲಿ ಹೊಸತನ

ಯುಗಾದಿ ಎಂದರೆ ಹೊಸ ಸೃಷ್ಟಿ – ಹಳೆಯದರ ಹೊಸ ರೂಪಾಂತರ. ಪ್ರತಿ ಯುಗಾದಿಯಲ್ಲಿಯೂ ನಾವು ರೂಪಾಂತರಗೊಳ್ಳಬೇಕು – ಹೊಸ ವ್ಯಕ್ತಿಗಳಾಗಬೇಕು. ಹೊಸದನ್ನು ಸಾಧಿಸುವ ಸಂಕಲ್ಪ ಮಾಡಬೇಕು. ಹೊಸ ಹುರುಪು ನಮ್ಮಲ್ಲಿ ಚಿಗುರಬೇಕು. ಇದು ವಸಂತಮಾಸದ ಪ್ರಾರಂಭವೂ ಕೂಡ. ಈ ಕಾಲದಲ್ಲಿ ಮರಗಿಡಗಳೆಲ್ಲ ಹಳೆಯದನ್ನೆಲ್ಲ ಕಿತ್ತೊಗೆದು ಹೊಸ ಚಿಗುರಿನಿಂದ ಶೋಭಿಸುತ್ತವೆ – ಹೊಸತನದಿಂದ ಬೆಳಗುತ್ತವೆ. ಹಾಗೆಯೇ ನಮ್ಮಲ್ಲೂ ಹೊಸ ಹುರುಪು ಜಿನುಗಬೇಕು. ಉತ್ತಮ ಗುಣಗಳನ್ನು ಬೆಳೆಸಿಕೊಳ್ಳುವ ಹೊಸ ಸಂಕಲ್ಪ ಮೂಡಬೇಕು. ಇದರ ಸಂಕೇತವಾಗಿಯೇ ಯುಗಾದಿಯ ದಿನ ಹೊಸ ಬಟ್ಟೆಯನ್ನು ತೊಡುತ್ತಾರೆ, ಮನೆಗಳನ್ನು ಹೊಸದಾಗಿ ಅಲಂಕರಿಸುತ್ತಾರೆ.

ಕ್ರೈಸ್ತ ಸಂತನಾದ ಬ್ರದರ್ ಲಾರೆನ್ಸ್ ಒಂದು ಚಳಿಗಾಲದ ದಿನ ಎಲೆಗಳು ಸಂಪೂರ್ಣ ಉದುರಿಹೋದ ಮರವೊಂದನ್ನು ನೋಡುತ್ತಾನೆ. ಆಗ ಅವನಿಗನಿಸುತ್ತದೆ, ಇನ್ನು ಸ್ವಲ್ಪ ಕಾಲದಲ್ಲಿಯೇ ಹೊಸ ಎಲೆಗಳು ಚಿಗುರುತ್ತವೆ, ಅನಂತರ ಹೂವು ಹಣ್ಣುಗಳು ಬಿಡುತ್ತವೆ ಎಂದು. ಈ ಆಲೋಚನೆ ಅವನಲ್ಲಿ ಅತ್ಯಂತ ಬಲಯುತವಾದ ಭಗವದ್ಭಾವನೆಯನ್ನು ಕೆರಳಿಸುತ್ತದೆ. ಭಗವಂತನ ಲೀಲೆ ಮತ್ತು ಅವನ ಶಕ್ತಿಯ ಅರಿವು ಅವನಿಗೆ ಉಂಟಾಗಿ ಅವನನ್ನು ಪರಿವರ್ತನೆಗೊಳಿಸುತ್ತದೆ. ಕಷ್ಟಸಂಕಟಗಳ ಚಳಿಗಾಲದ **ಶುಷ್ಕ ವಾತಾವರಣದಲ್ಲಿ** ನಮ್ಮೆಲ್ಲ ಆಶೋತ್ತರಗಳ ಎಲೆಗಳು ಉದುರಿಹೋದರೂ ವಸಂತದ ಸುಖಮಯ ವಾತಾವರಣ ಬಂದೇ ಬರುತ್ತದೆ ಮತ್ತು ಆಶೋತ್ತರಗಳ ಹೊಸ ಚಿಗುರು ಮೂಡಿ ಬರುತ್ತದೆ. ಯುಗಾದಿಯು ಎಲ್ಲ ನಿರಾಸೆಗಳನ್ನೂ ಬಿಟ್ಟು ನಮ್ಮ ಜೀವನದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿಯಾಗಬೇಕು.



ನಾವು ಹೊಸದನ್ನು ಪಡೆದಾಗ ಉಲ್ಲಾಸ ಉಂಟಾಗುತ್ತದೆ. ಅನೇಕ ದಿನಗಳಿಂದ ತೊಟ್ಟ ಬಟ್ಟೆಯನ್ನು ಬಿಟ್ಟು ಹೊಸ ಬಟ್ಟೆಯನ್ನು ತೊಟ್ಟಾಗ ಎಲ್ಲರ ಮುಖದಲ್ಲಿ ಒಂದು ಉಲ್ಲಾಸದ ಪ್ರಭೆ ಕಂಡುಬರುತ್ತದೆ. ಆದ್ದರಿಂದಲೇ ಯುಗಾದಿಯು ಒಂದು ಸಂಭ್ರಮದ

ದಿನ. ಆದರೆ ಈ ಉಲ್ಲಾಸ ಸಂಭ್ರಮ ಕೇವಲ ಬಾಹ್ಯ ಆಚರಣೆಗೆ ಮಾತ್ರ ಸೀಮಿತವಾಗಿರದೆ ಆಂತರಿಕ ಪರಿವರ್ತನೆಗೆ ನಾಂದಿಯಾಗಬೇಕು. ಇದೊಂದು ಆಧ್ಯಾತ್ಮಿಕ ಆಯಾಮ. ನಮ್ಮಲ್ಲಿ ಹೊಸತನದ ಉಲ್ಲಾಸ ಉಂಟಾಗಬೇಕು, ಹೊಸ ಜೀವನದ ಉಲ್ಲಾಸ ಉಂಟಾಗಬೇಕು.

## ತೈಲಸ್ನಾನದ ವೈಶಿಷ್ಟ್ಯ

ಅಂದು ಹೊಸ ವ್ಯಕ್ತಿಗಳಾಗಬೇಕೆಂದು ಸಾಂಕೇತಿಕವಾಗಿ ತೈಲಸ್ನಾನ ಮಾಡುತ್ತಾರೆ. ಸಂಸ್ಕೃತದಲ್ಲಿ ತೈಲ ಎನ್ನುವುದಕ್ಕೆ ಸ್ನೇಹ ಎಂಬ ಪದವೂ ಇದೆ. ಸ್ನಿಹ್ = ಅಂಟಿಕೊಳ್ಳುವುದು ಎಂಬ ಧಾತುವಿನಿಂದ **ಸ್ನೇಹ** ಎಂಬ ಪದ ಹುಟ್ಟಿದೆ. ತೈಲವೂ ಅಂಟಿಕೊಳ್ಳುತ್ತದೆ ಅಲ್ಲವೆ. ನಮಗೆ ಸ್ನೇಹಮಾರ್ಜನವಾಗಬೇಕೆಂಬ ಭಾವನೆಯ ಸಂಕೇತ ನಮಗಿಲ್ಲಿ ಸಿಗುತ್ತದೆ. ಸ್ನೇಹದಿಂದ ದ್ವೇಷ, ಅಸೂಯೆಗಳ ಕೊಳೆ ತೊಳೆದುಕೊಂಡು ಹೊಸ ವ್ಯಕ್ತಿಗಳಾಗಬೇಕು. ಇದರಿಂದ ಮನೆಯಲ್ಲಿ ಪರಸ್ಪರರಿಗಿರುವ ಮನಸ್ತಾಪಗಳೆಲ್ಲ ಹೋಗಿ ಹೊಸ ಪ್ರೀತಿಯ ಸಂಬಂಧ ಉಂಟಾಗುತ್ತದೆ. ಇದು ಕೆಲವು ತಿಂಗಳು ಮುಂದುವರೆಯುತ್ತದೆ. ಅನಂತರ ಮತ್ತೆ ದ್ವೇಷ, ಅಸೂಯೆ, ಮನಸ್ತಾಪಗಳು ಉಂಟಾಗಬಹುದು. ಇದೇ ಸ್ಥಿತಿಯಲ್ಲಿ ಕೆಲವು ತಿಂಗಳುಗಳು ಕಳೆಯುವ ಹೊತ್ತಿಗೆ ಮುಂದಿನ ಯುಗಾದಿ ಬಂದುಬಿಡುತ್ತದೆ! ಹೀಗೆಯೇ ಜೀವನ ಮುಂದುವರಿಯುತ್ತದೆ. ಕ್ರಮೇಣ ಪ್ರತಿದಿನವೂ ಯುಗಾದಿಯಾಗುವ ಸುದಿನ ಬರುತ್ತದೆ. ಆಗ ಪ್ರತಿನಿತ್ಯ ಬೆಳಗ್ಗೆ ಏಳುವಾಗಲೂ ಹೊಸ ವ್ಯಕ್ತಿಗಳಾಗಿಯೇ ಏಳುತ್ತೇವೆ. ಇನ್ನೂ ಮುಂದುವರಿದಂತೆ ನಾವು ಹಳಬರಾಗದೆ ಇರುವ ಕಾಲ ಬರುತ್ತದೆ; ಶ್ರೀರಾಮಕೃಷ್ಣರಂತೆ ಯಾವಾಗಲೂ ಹೊಸ ವ್ಯಕ್ತಿಗಳಾಗಿಯೇ ಇರುತ್ತೇವೆ.

## ಬೇವು-ಬೆಲ್ಲ

ಹಳೆಯದರ ನಾಶದಿಂದ ಹೊಸತು ಉಂಟಾಗುತ್ತದೆ. ಇಲ್ಲಿ ನಾಶವೆಂದರೆ ಅವಸ್ಥಾಂತರ ಅಷ್ಟೆ. ಹಳೆಯ ವ್ಯಕ್ತಿತ್ವ ರೂಪಾಂತರಗೊಂಡು ನಾವು ಹೊಸ ವ್ಯಕ್ತಿಗಳಾಗಬೇಕು. ಇದು ಯುಗಾದಿಯ ವೈಶಿಷ್ಟ್ಯ. ನಾವು ಪ್ರತಿ ವರ್ಷವೂ ಲೈಸೆನ್ಸ್ ಮುಂತಾದುವುಗಳನ್ನು ನವೀಕರಿಸುತ್ತೇವೆ(renew). ಹಾಗೆಯೇ ಹೊಸ ವರ್ಷದಲ್ಲಿ ನಮ್ಮನ್ನು ನಾವು ನವೀಕರಿಸಿಕೊಳ್ಳಬೇಕು. ನಮ್ಮ ಹಳೆಯ ಸಂಸ್ಕಾರಗಳನ್ನೆಲ್ಲ ಪರಿವರ್ತಿಸಿ ಹೊಸ ಸಂಸ್ಕಾರಗಳನ್ನು ಸೃಷ್ಟಿಸಬೇಕು. ನಾವು ಮನೆಗೆ ಸುಣ್ಣ, ಬಣ್ಣ ಬಳಿಯಬೇಕಾದರೆ ಹಳೆಯ ಬಣ್ಣವನ್ನೆಲ್ಲ ಕೆರೆದು ತೆಗೆಯಬೇಕಾಗುತ್ತದೆ. ಇಲ್ಲದಿದ್ದರೆ ಹೊಸ ಬಣ್ಣ ಅದರ ಮೇಲೆ ಸರಿಯಾಗಿ ಕೂರುವುದಿಲ್ಲ –ಸ್ವಲ್ಪ ಕಾಲದ ನಂತರ ಎದ್ದುಬರುತ್ತದೆ. ಹಾಗೆಯೇ ನಮ್ಮ ಹಳೆಯ ಸಂಸ್ಕಾರಗಳನ್ನೆಲ್ಲ ಕೆರೆದು ತೆಗೆಯಬೇಕು, ಮತ್ತು ಹೊಸ ಸಂಸ್ಕಾರಗಳನ್ನು ರೂಢಿಸಿಕೊಳ್ಳಬೇಕು. ಹೊಸ ಸಂಸ್ಕಾರಗಳನ್ನು ಕೆರೆದು ತೆಗೆಯುವುದು ತುಂಬ ವೇದನೆಯ ಕೆಲಸ– ಅದೊಂದು ಕಹಿ ಅನುಭವ. ಹೊಸ ಸತ್ಸಂಸ್ಕಾರಗಳು ಸರಿಯಾಗಿ ನೆಲೆನಿಂತಾಗ ಅದೊಂದು ಆನಂದಾನುಭವ– ಆಗ ಜೀವನ ಸಿಹಿಯಾಗುತ್ತದೆ. ಹೀಗೆ ಜೀವನವೆನ್ನುವುದು ನಿರಂತರ ನವೀಕರಣ – ಹಳೆಯ ಸಂಸ್ಕಾರಗಳನ್ನು ಕೆರೆದು ತೆಗೆಯುವುದು ಹಾಗೂ ಹೊಸದನ್ನು ರೂಢಿಸಿಕೊಳ್ಳುವುದು. ಈ **ಕಹಿ-ಸಿಹಿ** ಅನುಭವದ ಸಂಕೇತವಾಗಿಯೇ ಬೇವು **-ಬೆಲ್ಲ**ವನ್ನು ತಿನ್ನುವ ಪದ್ಧತಿ ಇದೆ.

> ಆಗ ಚಳಿಗಾಲ. ಮರದ ಎಲೆಗಳೆಲ್ಲ ಉದುರುತ್ತಿದ್ದವು. ನಾನು ಎಲೆಯನ್ನು 'ನಿನಗೆ ಭಯವಾಗುತ್ತಿದೆಯ'ಎಂದು ಕೇಳಿದೆ. ಎಲೆಯು ಹೇಳಿತು: 'ಇಲ್ಲ ,ವಸಂತ ಮತ್ತು ಬೇಸಿಗೆ ಕಾಲವಿಡೀ ನಾನು ಪೂರ್ಣ ಜೀವಂತವಾಗಿದ್ದೆ. ನಾನು ಮರದ ಪೋಷಣೆಗಾಗಿ ಕಷ್ಟಪಟ್ಟು ದುಡಿದಿದ್ದೇನೆ. ಈಗ ನನ್ನ ಹೆಚ್ಚಿನ ಅಂಶ ಮರದಲ್ಲಿಯೇ ಇದೆ. ನಾನು ಈ ರೂಪಕ್ಕೇ ಸೀಮಿತನಾಗಿಲ್ಲ. ಪೂರ್ಣಮರವೂ ನಾನಾಗಿದ್ದೇನೆ. ನಾನು ಮಣ್ಣಿನಲ್ಲಿರುವಾಗಲೂ ಮರವನ್ನು ಪೋಷಿಸುವುದನ್ನು ಮುಂದುವರಿಸುತ್ತೇನೆ. ಆದ್ದರಿಂದ ನನಗೆ ಯಾವ ಚಿಂತೆಯೂ ಇಲ್ಲ, ನಾನು ಈ ಕೊಂಬೆಯನ್ನು ಬಿಟ್ಟು ನೆಲವನ್ನುತಲುಪಿದ ಮೇಲೆ ಮರಕ್ಕೆ ಕೈಬೀಸಿ ಹೇಳುತ್ತೇನೆ: 'ನಾನು ಬಹುಬೇಗನೆ ನಿನ್ನನ್ನು ನೋಡುತ್ತೇನೆ.'......ನಾನು ಎಲೆಗೆ ತಲೆಬಾಗಿದೆ, ನಾನು ಅದರಿಂದ ಬಹಳಷ್ಟು ಕಲಿಯುವುದಿದೆ.
>
> *Thich Nhat Hanh*, **'Peace in Every Step'**

## ಸ್ಟಾಕ್ ಚೆಕಿಂಗ್

ಹೊಸ ಆರ್ಥಿಕ ವರ್ಷ ಪ್ರಾರಂಭವಾಗುವುದಕ್ಕಿಂತ ಮುಂಚೆ ವ್ಯಾಪಾರಸ್ಥರೆಲ್ಲರೂ ಸ್ಟಾಕ್ ಚೆಕಿಂಗ್ ನಡೆಸುತ್ತಾರೆ. ಇಡೀ ವರ್ಷ ನಡೆದ ವ್ಯಾಪಾರದ ಒಂದು ಸಮಗ್ರ ಚಿತ್ರವನ್ನು ಪಡೆಯುತ್ತಾರೆ. ಹಾಗೆಯೇ ನಾವೂ ಹೊಸ ವರ್ಷಾರಂಭದಲ್ಲಿ ನಮ್ಮ ಜೀವನದ ಸ್ಟಾಕ್ ಚೆಕಿಂಗ್ ನಡೆಸಬೇಕು. ಎಷ್ಟು ದುಷ್ಕಾರ್ಯಗಳನ್ನು ಮಾಡಿದ್ದೇನೆ; ಎಷ್ಟು ಸತ್ಕಾರ್ಯಗಳನ್ನು ಮಾಡಿದ್ದೇನೆ ; ಎಂತೆಂಥ ಸಂಸ್ಕಾರಗಳನ್ನು ರೂಢಿಸಿಕೊಂಡಿದ್ದೇನೆ; ನೈತಿಕ ಮತ್ತು ಆಧ್ಯಾತ್ಮಿಕವಾಗಿ ಎಷ್ಟು ಲಾಭ-ನಷ್ಟವಾಗಿದೆ– ಈ ರೀತಿ ನಾವು ಅಂತಃಕರಣದ ಕಡತವನ್ನು ಬಿಚ್ಚಿ ಸ್ಟಾಕ್ ಚೆಕಿಂಗ್ ನಡೆಸಬೇಕು.

ಸ್ಟಾಕ್ ಚೆಕಿಂಗ್ ಮಾಡುವಾಗ ಸದ್ಯಕ್ಕೆ ಎಲ್ಲ ವ್ಯಾಪಾರವನ್ನು ನಿಲ್ಲಿಸುತ್ತೇವೆ– ಅಂಗಡಿ ಬಾಗಿಲು ಹಾಕುತ್ತೇವೆ. ಹಾಗೆ ಮಾಡದಿದ್ದರೆ ಸ್ಟಾಕ್ ಚೆಕಿಂಗ್ ಸುಸೂತ್ರವಾಗಿ ಆಗುವುದಿಲ್ಲ. ಹಾಗೆಯೇ ನಾವು ಬಾಹ್ಯ ವ್ಯವಹಾರಗಳನ್ನು ನಿಲ್ಲಿಸಿ, ಬಾಗಿಲನ್ನು ಮುಚ್ಚಿಕೊಂಡು ನಮ್ಮೊಳಗೆ ಸ್ಟಾಕ್ ಚೆಕಿಂಗ್ ಮಾಡಬೇಕು. ಇದಕ್ಕಾಗಿಯೇ ಶ್ರೀರಾಮಕೃಷ್ಣರು ಆಗಾಗ ಏಕಾಂತ ವಾಸ ಮಾಡಲು ಭಕ್ತರಿಗೆ ಉಪದೇಶಿಸುತ್ತಿದ್ದರು. ಏಕಾಂತದಲ್ಲಿ ನಮ್ಮನ್ನು ನಾವು ಎದುರಿಸಲು ಸಾಧ್ಯವಾಗುತ್ತದೆ. ಬೇರೆ ಸಂದರ್ಭಗಳಲ್ಲಿ ನಾವು ಇತರರೊಡನೆ ವ್ಯವಹರಿಸುತ್ತೇವೆ. ಬೇರಾರೂ ಇಲ್ಲದೆ ನಾವೊಬ್ಬರೇ ಇದ್ದಾಗ ನಮ್ಮನ್ನು ನಾವು ಸಂಧಿಸುತ್ತೇವೆ–ನಮ್ಮ ಕಂಪನಿಯಲ್ಲಿ ನಾವಿರುತ್ತೇವೆ. ಆಗ ನಮ್ಮನ್ನು ನಾವು ಅಧ್ಯಯನ ಮಾಡಲು (ಸ್ವಾಧ್ಯಾಯ)

ಸಾಧ್ಯವಾಗುತ್ತದೆ. ಆದ್ದರಿಂದಲೇ ಹೆನ್ರಿ ಥೋರೋ ಹೇಳುತ್ತಾನೆ: 'ಏಕಾಂತದಂತಹ ಸಂಗಾತಿ ಮತ್ತಾವುದೂ ಇಲ್ಲ'(I never found the companion that was so companianable as solitude).

ವರ್ಷಕ್ಕೊಮ್ಮೆಯಾದರೂ ನಮ್ಮ ವ್ಯವಹಾರಗಳಿಗೆ ಸ್ವಲ್ಪ ಬ್ರೇಕ್ ಹಾಕಿ ಸುಮ್ಮನೆ ಕುಳಿತು ಸ್ಟಾಕ್ ಚೆಕಿಂಗ್ ನಡೆಸಬೇಕು. ವಿಶೇಷವಾಗಿ ಇತ್ತೀಚಿನ ದಿನಗಳಲ್ಲಿ ಇದು ಹೆಚ್ಚು ಅವಶ್ಯಕ. ಇಂದು ಸಮಾಜ ತ್ವರಿತ ಗತಿಯಲ್ಲಿ ಮುನ್ನಡೆಯುತ್ತಿದೆ. ವಾಹನಗಳಲ್ಲಿ ವೇಗ ಅಧಿಕ ವಾದಷ್ಟೂ ಬ್ರೇಕಿನ ಅವಶ್ಯಕತೆ ಹೆಚ್ಚುರುತ್ತದೆ. ನಿಧಾನವಾಗಿ ಚಲಿಸುವ ಎತ್ತಿನ ಗಾಡಿಗೆ ಬ್ರೇಕಿಲ್ಲದಿದ್ದರೂ ನಡೆಯುತ್ತದೆ. ಅದಕ್ಕಿಂತ ವೇಗ ವಾಗಿ ಚಲಿಸುವ ಸೈಕಲ್‌ಗೆ ಬ್ರೇಕು ಬೇಕಾಗುತ್ತದೆ, ಕೆಲವೊಮ್ಮೆ ಬ್ರೇಕಿಲ್ಲದೆಯೂ ನಡೆಸಬಹುದು. ವೇಗವಾಗಿ ಚಲಿಸುವ ಬಸ್ಸು ಕಾರು ಮುಂತಾದುವುಗಳನ್ನು ಬ್ರೇಕಿಲ್ಲದೆ ನಡೆಸುವಂತೆಯೇ ಇಲ್ಲ. ಕ್ಷಿಪ್ರ ಗತಿಯಲ್ಲಿ ಮುನ್ನಡೆಯುತ್ತಿರುವ ನಮಗೆ ಇಂದು ಬ್ರೇಕಿನ ಅವಶ್ಯಕತೆ ಬಹಳವಿದೆ. ಆದ್ದರಿಂದ ಇಂದು ನಾವು ಆಗಾಗ ನಿಂತು ಏನು ಮಾಡುತ್ತಿದ್ದೇವೆ, ಯಾವ ದಿಕ್ಕಿನಲ್ಲಿ ಓಡುತ್ತಿದ್ದೇವೆ, ನಮ್ಮ ಗುರಿ ಯೇನು, ಇತ್ಯಾದಿಗಳನ್ನು ಕುರಿತು ಆಳವಾಗಿ ಆಲೋಚಿಸಬೇಕು. ಇದೂ ಕೂಡಾ ಸ್ಟಾಕ್ ಚೆಕಿಂಗ್‌ನ ಒಂದು ಅತಿ ಮುಖ್ಯ ಅಂಶ.



## ಪಂಚಾಂಗಶ್ರವಣ

ಇಂತಹ ಪುನರ್ವಿಮರ್ಶೆ ಮುಂದಿನ ಸಂವತ್ಸರವನ್ನು ಹೆಚ್ಚು ಭರವಸೆಯಿಂದ ಎದುರಿಸುವ ಸಾಮರ್ಥ್ಯವನ್ನು ನೀಡುತ್ತದೆ. ಯುಗಾದಿಯ ದಿನ ಪಂಚಾಂಗವನ್ನು ಓದುವ ಪದ್ಧತಿ ಇದೆ. ಆ ವರ್ಷದ ಮುಖ್ಯ ಉತ್ಸವಗಳು, ಘಟನೆಗಳು, ಹವಾಮಾನದ ಒಂದು ಸ್ಥೂಲ ಪರಿಚಯ ಮುಂತಾದುವುಗಳನ್ನು ಪಠಣ ಮಾಡುತ್ತಾರೆ. ಇದು ಮುಂದಾಗುವುದನ್ನು ಎದುರಿಸಲು ನಮ್ಮ ಮನಸ್ಸನ್ನು ಅಣಿಗೊಳಿಸಲು ಸಹಾಯಕವಾಗುತ್ತದೆ. ಹೀಗೆಯೇ ನಾವು ಮುಂದೆ ಏನು ಮಾಡಬೇಕು, ಏನಾಗಬೇಕು, ಏನನ್ನು ಸಾಧಿಸಬೇಕು ಎಂಬುದರ ಒಂದು ಹೊಸ ಪಂಚಾಂಗವನ್ನು ಸಿದ್ಧಪಡಿಸಬೇಕು. ಆ ಪಂಚಾಂಗದಂತೆ ನಡೆಯಲು ನಾವು ಪ್ರಯತ್ನಿಸಬೇಕು. ಪ್ರತಿವರ್ಷ ಈ ಪಂಚಾಂಗದ ರಿವಿಶನ್ ನಡೆಯಬೇಕು.

ಮುಂದಿನ ಭವಿಷ್ಯವನ್ನು ನಾವು ಹಳೆಯದರ ಆಧಾರದ ಮೇಲೆ ಕಟ್ಟುತ್ತೇವೆ. ನಾವು ಹಿಂದೆ ಮಾಡಿದ ಸರಿ-ತಪ್ಪುಗಳು, ಅನುಭವಿಸಿದ ಸುಖ-ದುಃಖಗಳು ಇವೆಲ್ಲವೂ ನಮ್ಮ ಭವಿಷ್ಯವನ್ನು ರೂಪಿಸಲು ಸಹಕಾರಿಗಳು. ನಾವು ಹಿಂದೆ ಮಾಡಿದ ತಪ್ಪುಗಳಿಗಾಗಿ ಪರಿತಪಿಸ ಬೇಕಾಗಿಲ್ಲ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಸೋಲನ್ನು ಲೆಕ್ಕಿಸಬೇಡಿ. ಇದು ಸ್ವಾಭಾವಿಕ. ಈ ಸೋಲೇ ಜೀವನದ ಸೌಂದರ್ಯ. ಇದಿಲ್ಲದೆ ಜೀವ ಹೇಗಿರುವುದು? ಹೋರಾಟಗಳನ್ನು ಮತ್ತು ತಪ್ಪುಗಳನ್ನು ಲೆಕ್ಕಿಸಬೇಡಿ. ಹಸು ಸುಳ್ಳು ಹೇಳುವುದನ್ನು ನಾನು ಕೇಳಿಲ್ಲ. ಆದರೆ ಅದೊಂದು ಹಸು, ಅಷ್ಟೆ. ಅದೆಂದಿಗೂ ಮನುಷ್ಯನಲ್ಲ. ಸೋಲುವುದು, ಸ್ವಲ್ಪ ಜಾರುವುದು – ಇವನ್ನು ನೀವು ಗಮನಿಸಬೇಕಾಗಿಲ್ಲ. ಸಾವಿರ ವೇಳೆ ಆದರ್ಶವನ್ನು ಹಿಡಿದು ಕೊಳ್ಳಿ. ಸಾವಿರ ಸಲ ಸೋತರೂ ಮತ್ತೊಮ್ಮೆ ಪ್ರಯತ್ನಿಸಿ.'(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ೨.೮೮-೮೯)

'ಯಾವುದೊ ತಪ್ಪನ್ನು ಮಾಡಿರುವೆ ಎಂದು ಹಿಂದಿರುಗಿ ನೋಡ ದಿರಿ. ನೀವು ಈ ತಪ್ಪುಗಳನ್ನೆಲ್ಲ ಮಾಡದೆ ಇದ್ದಿದ್ದರೆ ಈಗಿನಂತೆ ಇರುತ್ತಿದ್ದಿರಿ ಎಂದು ಭಾವಿಸಿದರೇನು? ಹಾಗಾದರೆ ನಿಮ್ಮ ತಪ್ಪು ಗಳಿಗೆ ಕೃತಜ್ಞರಾಗಿರಿ. ಅವು ನಿಮಗೆ ಅರಿಯದ ದೇವದೂತರಂತೆ ಇದ್ದವು......ಜೀವನದ ಸಮರಾಂಗಣದಲ್ಲಿ ತಪ್ಪೆಂಬ ಧೂಳು ಏಳುವುದು ಸಹಜ. (ಕೃತಿಶ್ರೇಣಿ ೭.೨೭೦)

## ಸಂವತ್ಸರದಿಂದ ಸಂಸಾರ

ನಾವು ವರ್ಷವನ್ನು **'ಸಂವತ್ಸರ'** ಎಂದು ಕರೆಯುತ್ತೇವೆ. **'ವತ್ಸರ'**ಎಂದರೆ ವರ್ಷ. **'ಸಂ'**ಎಂದರೆ ಸಮ್ಯಕ್, ಸರಿಯಾದುದು ಎಂದು. ಸುಖಶಾಂತಿಯಿಂದ ಕೂಡಿದ, ನೈತಿಕ ಪರಿಪೂರ್ಣತೆ ಯಿಂದ ಕೂಡಿದ ವತ್ಸರವು **ಸಂವತ್ಸರ.** ವತ್ಸರವನ್ನು ಸಂವ ತ್ಸರವನ್ನಾಗಿ ಮಾಡುವುದು ನಮ್ಮ ಕೈಯಲ್ಲಿದೆ. ಸತ್‌ಸಂಕಲ್ಪದಿಂದ, ಸದ್ಭಾವದಿಂದ, ಸಚ್ಚಾರಿತ್ರ್ಯದಿಂದ ಮತ್ತು ಸತ್ಕಾರ್ಯದಿಂದ ಕೇವಲ ವತ್ಸರವು ನಮ್ಮ ಪಾಲಿಗೆ ಸಂವತ್ಸರವಾಗುತ್ತದೆ.

ಸಂಸಾರವೆಂದರೆ– ಸಮ್ಯಕ್‌ಸರತಿ– ಸರಿಯಾದ ರೀತಿಯಲ್ಲಿ ನಡೆದುಕೊಂಡುಹೋಗುವುದು, ಎಂದು. ಇದಕ್ಕೆ ಸಂಸಾರದಲ್ಲಿ ಇರುವವರೆಲ್ಲರೂ ಸಹಕರಿಸಬೇಕು. ಪರಸ್ಪರ ಪ್ರೀತಿ, ಸಹಕಾರ ಇವು ಗಳಿದ್ದರೆ ಸಂಸಾರವಾಗುತ್ತದೆ, ಇಲ್ಲದಿದ್ದರೆ ಅದೊಂದು ಸಂಗ್ರಾಮ ವಾಗುತ್ತದೆ. ವ್ಯಕ್ತಿ ತನ್ನೊಳಗೆ ಸುಖಶಾಂತಿಗಳನ್ನು ಅನುಭವಿಸ ದಿದ್ದರೆ ಇತರರೊಡನೆ ಸಹಕರಿಸಿ ಬಾಳಲಾರ. ಇದಕ್ಕೆ ವ್ಯಕ್ತಿಯ ಆಂತರಿಕ ಪರಿವರ್ತನೆಯಾಗಬೇಕು. ಸತ್ಸಂಕಲ್ಪ, ಸದ್ಭಾವ, ಸಚ್ಚಾರಿತ್ರ್ಯ ಮತ್ತು ಸತ್ಕರ್ಮಗಳಿಂದ ಆಂತರಿಕ ಪರಿವರ್ತನೆ ಯಾಗುತ್ತದೆ. ಇವುಗಳ ಮೂಲಕ ವತ್ಸರವನ್ನು ಸಂವತ್ಸರ ವನ್ನಾಗಿಸಬೇಕು. ಇದರಿಂದಲೇ ಸಾಮಾನ್ಯ ಕುಟುಂಬವು ಸಂಸಾರ ವಾಗುತ್ತದೆ. ಪ್ರತಿ ಯುಗಾದಿಯೂ ಈ ರೀತಿಯ ಸಂಸಾರವನ್ನು ರೂಪಿಸುವುದಕ್ಕೆ ನಮಗೆ ಸ್ಫೂರ್ತಿಯನ್ನು ನೀಡಬೇಕು.

## ಜೀವನ-ಮರಣ

ಸೃಷ್ಟಿ, ಸ್ಥಿತಿ ಮತ್ತು ಲಯ ಎಲ್ಲ ವಸ್ತುಗಳಿಗೂ, ವ್ಯಕ್ತಿಗಳಿಗೂ ಹಾಗೂ ಇಡೀ ವಿಶ್ವಕ್ಕೂ ಸ್ವಾಭಾವಿಕವಾದವು. ಹೊಸ ಜೀವನಕ್ಕೆ ಅಂದರೆ ಹೊಸ ಸೃಷ್ಟಿಗೆ ಸಿದ್ಧರಾಗುವಂತೆಯೇ ಪ್ರಳಯಕ್ಕೂ ನಾವು ಸಿದ್ಧರಾಗಬೇಕು. ಯುಗಾದಿಯನ್ನು ನಾವು ಆದರಿಸುವಂತೆ ಯುಗಾಂತ್ಯವನ್ನೂ ನಾವು ಆದರಿಸಬೇಕು. ನಾವು ಜೀವಿಸುವುದೆಂದರೆ ಪ್ರತಿಕ್ಷಣ ಸಾಯುವುದು, ಪ್ರತಿಕ್ಷಣವೂ ನಾವು ಮೃತ್ಯುವನ್ನು

ಸಮೀಪಿಸುತ್ತಿರುತ್ತೇವೆ. ನಮ್ಮ ದೇಹತ್ಯಾಗ ಸಾವಿನ ಅಂತ್ಯ ಸ್ಥಿತಿ. ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ :*Everyday we live, a day we die* ( ನಾವು ಬದುಕುವ ಒಂದೊಂದು ದಿನವೂ ಮೃತ್ಯುವೇ). ಜೀವನ–ಮರಣಗಳೆಂಬುದು ಮೃತ್ಯುವಿನ ಎರಡು ಮುಖಗಳು. ನಮಗೆ ಒಂದು ಬೇಕಾದರೆ ಮತ್ತೊಂದನ್ನೂ ಸ್ವೀಕರಿಸಲೇಬೇಕು. ಆದ್ದರಿಂದ ಜೀವನದುದ್ದಕ್ಕೂ ನಾವು ಸಾವಿಗೆ ಸಿದ್ಧರಾಗಿರಬೇಕು. ಜೀವನವನ್ನು ಸ್ವೀಕರಿಸುವಷ್ಟೆ ಆದರದಿಂದ ಅದನ್ನೂ ಸ್ವೀಕರಿಸಬೇಕು. ಒಬ್ಬ ತತ್ತ್ವಜ್ಞಾನಿಯು ಸಾಯುವುದಕ್ಕೆ ಮುಂಚೆ ಸುತ್ತಲೂ ನೆರೆದಿರುವವರನ್ನು ಉದ್ದೇಶಿಸಿ ಹೀಗೆ ಹೇಳಿದನಂತೆ:'ಇದು ನನ್ನ ಜೀವನದ ನಾಟಕದ ಕೊನೆಯ ದೃಶ್ಯ. ಇದನ್ನು ನೋಡಿ ನೀವೆಲ್ಲರೂ ಆನಂದದಿಂದ ಚಪ್ಪಾಳೆ ತಟ್ಟಬೇಕು. ಆದರೆ *'Once more'*( ಇನ್ನೊಂದು ಬಾರಿ ) ಎಂದು ಹೇಳಬಾರದು.'

ಸ್ವಾಮಿ ವಿವೇಕಾನಂದರು ಹೇಳುತ್ತಾರೆ :

**ಯಾರು ದುಃಖವ ಪ್ರೀತಿಸಿ ಮೃತ್ಯುವ –**
**ನಪ್ಪುವ ಸಾಹಸ ಮಾಡುವರೊ,**
**ಯಾರು ಕಾಳಿ ಪ್ರಳಯಾಟ್ಟಹಾಸದ**
**ರುದ್ರ ನರ್ತನದಿ ತೊಡಗುವರೊ**
**ಅವರ ಸಮೀಪದಿ ತಾಯಿ ಸರ್ವದಾ**
**ಕದಲದೆ ವಾಸವ ಗೈಯುವಳು**

ಶ್ರೀರಾಮಕೃಷ್ಣರು ತಮ್ಮ ಒಂದು ದಿವ್ಯ ದರ್ಶನದಲ್ಲಿ, ದೇವಿಯಂತೆ ಕಾಣುತ್ತಿದ್ದ ಮಹಿಳೆಯೊಬ್ಬಳು ಒಂದು ಮಗುವನ್ನು ಹೆತ್ತು, ಅದನ್ನು ಪ್ರೀತಿ ವಾತ್ಸಲ್ಯಗಳಿಂದ ಮುದ್ದಿಸಿ, ಸಲಹಿ ಅನಂತರ ವಿಕಾರ ರೂಪವನ್ನು ತಾಳಿ ಆ ಮಗುವನ್ನು ಕಚ್ಚಿ ತಿಂದು ಹಾಕುವುದನ್ನು ನೋಡುತ್ತಾರೆ. ಜಗನ್ಮಾತೆಗೆ ಹುಟ್ಟುಸಾವುಗಳೆಲ್ಲವೂ ವಿವಿಧ ಘಟನೆಗಳು ಅಷ್ಟೆ. ಪ್ರಕೃತಿಯಲ್ಲಿ ಇವು ನಿರಂತರವಾಗಿ ನಡೆಯುತ್ತಿವೆ. ಇವುಗಳಲ್ಲಿ ಯಾವುದನ್ನೂ ಇದು ಒಳಿತು, ಇದು ಕೆಡುಕು ಎಂದು ಹೇಳುವಂತಿಲ್ಲ. ಸಮಷ್ಟಿ ದೃಷ್ಟಿಯಿಂದ ಎಲ್ಲವೂ ಕೇವಲ ಘಟನೆಗಳು ಅಷ್ಟೆ.

**ನಿಮ್ಮದು ತೊಟ್ಟಿಲು ಗೋರಿಯಾಗಿಯೂ ಗೋರಿ ತೊಟ್ಟಿಲಾಗಿಯೂಬದಲಾಗುತ್ತಿರುವ ಪ್ರಪಂಚ**

*Yours is a world of cradles turning into tombs, and tombs becoming cradles.*

*- Book of Mirdad*, Mikhail Naimy

ಯುಗಾದಿಯು ನಮ್ಮಲ್ಲಿ ಕಾಲಗತಿಯ ಅರಿವನ್ನುಂಟುಮಾಡಿ, ಮೃತ್ಯು ಮುಖ ಪ್ರಯಾಣದಲ್ಲಿ ಆಗಲೇ ಕಳೆದುಹೋದ ವರ್ಷಗಳ ನೆನಪನ್ನುಂಟುಮಾಡಿ ಮೃತ್ಯುವಿಗೆ ನಮ್ಮ ಮನಸ್ಸನ್ನು ಸಿದ್ಧಗೊಳಿಸಬೇಕು. ಜೀವನ–ಮರಣಗಳೆರಡನ್ನೂ ಉತ್ಸಾಹದಿಂದ ಸ್ವೀಕರಿಸಬೇಕೆಂಬುದೇ ಯುಗಾದಿಯ ಸಂದೇಶ.

*

## ಧನಮದದ ಪರದೆ

ಒಂದು ದಿನ ಸಂಜೆ ಗುರು ಗೋವಿಂದ ಸಿಂಘ್ ಯಮುನಾನದೀ ತೀರದಲ್ಲಿ ಪ್ರಾರ್ಥನೆಮಾಡುತ್ತ ಕುಳಿತಿದ್ದರು. ರಘುನಾಥ ಎಂಬ ಶ್ರೀಮಂತ ಶಿಷ್ಯನೊಬ್ಬನು ಬಂದು ಅವರ ಪಾದಕ್ಕೆರಗಿ 'ಸ್ವಾಮಿ, ನನ್ನ ಈ ಅಲ್ಪಕಾಣಿಕೆಯನ್ನು ಸ್ವೀಕರಿಸಬೇಕು' ಎಂದು ಅತ್ಯಂತ ನಮ್ರತೆಯಿಂದ ಕೇಳಿಕೊಂಡನು. ಹೀಗೆ ಹೇಳಿ ಎರಡು ರತ್ನಖಚಿತವಾದ ಕೈಕಡಗಗಳನ್ನು ಗುರುಗಳಿಗೆ ನಿವೇದಿಸಿದನು. ಗುರುಗಳು ಅದನ್ನು ಸಂತೋಷದಿಂದ ಸ್ವೀಕರಿಸಿ, ಅದರಲ್ಲಿ ಒಂದನ್ನು ತೆಗೆದುಕೊಂಡು ಮೇಲೆ ಹಾರಿಸಿ ಕೈಯಲ್ಲಿ ಹಿಡಿಯುತ್ತ ಆಟವಾಡತೊಡಗಿದರು. ಹೀಗೆ ಮಾಡುತ್ತ ಅದನ್ನು ನೀರಿಗೆ ಎಸೆದುಬಿಟ್ಟರು.

ರಘುನಾಥನು ಅದನ್ನು ಎತ್ತಿಕೊಂಡು ಬರಲು ಕೂಡಲೆ ನೀರಿಗೆ ಧುಮುಕಿದನು. ಅವನು ತನ್ನ ಅನ್ವೇಷಣೆಯಲ್ಲಿ ತೊಡಗಿರುವಾಗ ಗೋವಿಂದ ಸಿಂಘ್ ಧ್ಯಾನಮಗ್ನರಾಗಿದ್ದರು. ಶಿಷ್ಯನು ತನ್ನ ವ್ಯರ್ಥ ಹುಡುಕಾಟವನ್ನು ಮುಗಿಸಿ ಬಂದು ಖಿನ್ನತೆಯಿಂದ ನುಡಿದನು:'ಸ್ವಾಮಿ, ಒಡವೆ ಸಿಕ್ಕಲೇ ಇಲ್ಲ. ಅದು ಎಲ್ಲಿ ಬಿತ್ತು ಎಂದು ಸ್ಪಷ್ಟವಾಗಿ ತೋರಿಸಿದರೆ ಮತ್ತೊಮ್ಮೆ ನಾನು ಪ್ರಯತ್ನಪಟ್ಟು ನೋಡುತ್ತೇನೆ.'

ಗುರುಗಳು ಮುಗುಳ್ನಗುತ್ತ ಇನ್ನೊಂದು ಕೈಕಡಗವನ್ನೂ ಎಸೆದು, 'ನೋಡು, ಅಲ್ಲಿ ಬಿತ್ತು.' ಎಂದು ಹೇಳಿದರು.

ರಘುನಾಥನು ಸ್ತಂಭೀಭೂತನಾದನು.ಗುರುಗಳ ಈ ವಿಚಿತ್ರ ವರ್ತನೆ ಅವನಿಗೆ ಅರ್ಥವಾಗಲೇ ಇಲ್ಲ. ಸ್ವಲ್ಪ ಹೊತ್ತಿನ ನಂತರ ಗುರುಗಳೇ ಮೇಲೆದ್ದು ಶಿಷ್ಯನನ್ನು ತಬ್ಬಿಕೊಂಡು ಹೇಳಿದರು. 'ರಘುನಾಥ, ನಾನು ಉದ್ದೇಶಪೂರ್ವಕವಾಗಿಯೇ ಕೈಕಡಗಗಳನ್ನು ತ್ಯಾಗಮಾಡಿದೆ. ನಿನ್ನ ಮನಸ್ಸು ಅವುಗಳಲ್ಲಿ ತುಂಬ ಆಸಕ್ತವಾಗಿತ್ತು, ಅವು ನನ್ನ ಮತ್ತು ನಿನ್ನ ನಡುವೆ ಪರದೆಯಂತಿದ್ದವು. ಧನಮದವನ್ನು ಪರಿತ್ಯಜಿಸು.'

ರಘುನಾಥನಿಗೆ ತನ್ನ ತಪ್ಪಿನ ಅರಿವಾಯಿತು. ಅಂದಿನಿಂದ ಅವನ ವ್ಯಕ್ತಿತ್ವದಲ್ಲಿ ಗಮನಾರ್ಹ ಬದಲಾವಣೆಯುಂಟಾಯಿತು

(ಸ್ವಾಮಿ ಬುಧಾನಂದರ ***The Saving Challenge of Religion*** ಎಂಬ ಗ್ರಂಥದಿಂದ)